**RGRHCL**

# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಉದ್ದಿಮೆ)**

ನಂ. 1,2,3,4,ಐ.ಟಿ.ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು - 560 044.

<table>
<tr><td>1.</td><td>ಯೋಜನೆಯ ಹೆಸರು</td><td colspan="2">ವಾಜಪೇಯಿ ನಗರ ವಸತಿ ಯೋಜನೆ</td></tr>
<tr><td>2.</td><td>ಪ್ರತಿ ಮನೆಯ ಘಟಕ ವೆಚ್ಚ</td><td colspan="2">ಗರಿಷ್ಠ ರೂ. 2,70,000/-</td></tr>
<tr><td></td><td></td><td>ಅ) ಸಹಾಯಧನ</td><td>• ವಾಜಪೇಯಿ ವಸತಿ ಯೋಜನೆ: ರೂ 1,20,000/-<br>• ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ): ರೂ 1,50,000/-</td></tr>
<tr><td></td><td></td><td>ಆ) ಫಲಾನುಭವಿಯ ಸ್ವಸಹಾಯ ವಂತಿಗೆ</td><td>ಈ ಯೋಜನೆಯಡಿಯಲ್ಲಿ ಒದಗಿಸಲಾಗುವ ಆರ್ಥಿಕ ಸಹಾಯಧನ ಜೊತೆಗೆ, ಫಲಾನುಭವಿಯು ತನ್ನ ಸಾಮರ್ಥ್ಯ ಹಾಗೂ ವಸತಿಯ ಅವಶ್ಯಕತೆಗೆ ಅನುಸಾರವಾಗಿ ಸಾಧ್ಯವಾದಷ್ಟು ಸ್ವಂತ ಉಳಿತಾಯ ಹೂಡಿಕೆ ಮಾಡಿ ಹೆಚ್ಚಿನ ಹಾಗೂ ಉತ್ತಮ ಸೌಲಭ್ಯಗಳನ್ನು ಹೊಂದಬಹುದು.</td></tr>
<tr><td>3.</td><td>ಅರ್ಹತೆ ಮತ್ತು ಷರತ್ತುಗಳು</td><td colspan="2">❖ ನಗರ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು 2003ರಲ್ಲಿ ತಯಾರಿಸಲಾದ ವಸತಿರಹಿತರ ಸಮೀಕ್ಷೆಯ ಪಟ್ಟಿಯಲ್ಲಿ ಸೇರಿರಬೇಕು. ಒಂದು ವೇಳೆ ಅರ್ಹ ಫಲಾನುಭವಿಯು ಸೇರದೆ ಇದ್ದಲ್ಲಿ ಅಂತಹ ಫಲಾನುಭವಿಗಳನ್ನು ಪಟ್ಟಿಗೆ ಸೇರಿಸಬಹುದಾಗಿರುತ್ತದೆ (ಗುಡಿಸಲು ವಾಸಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು).<br>❖ ಮಾಸಿಕ ಆದಾಯ ರೂ 7,300/- ಒಳಗಿರಬೇಕು. (ವಾರ್ಷಿಕ ಆದಾಯ 87,600/-)<br>❖ ಫಲಾನುಭವಿಗಳು ಈ ಯೋಜನೆಯ ಪ್ರಯೋಜನೆ ಪಡೆಯಬೇಕಾಗಿದ್ದಲ್ಲಿ, ಸ್ವಂತ ನಿವೇಶನ ಹೊಂದಿರಬೇಕು. ನಿವೇಶನಕ್ಕೆ ಸಂಬಂಧಿಸಿದಂತೆ ನಿವೇಶನದ ಹಕ್ಕುಪತ್ರ / ಕ್ರಯಪತ್ರ / ದಾನ ಪತ್ರ / ಉಡುಗೊರೆ ಪತ್ರ/ ಖಾತ ಪತ್ರಗಳನ್ನು ಹೊಂದಿರಬೇಕು.<br>❖ <u>ಮೀಸಲಾತಿ:</u> ಅಲ್ಪಸಂಖ್ಯಾತರಿಗೆ : 10% ಮತ್ತು ಸಾಮಾನ್ಯ ವರ್ಗದವರಿಗೆ 90% ರಷ್ಟು ಮೀಸಲಾತಿಯನ್ನು ಕಲ್ಪಿಸಿದೆ.<br>❖ ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>❖ <u>ಫಲಾನುಭವಿಗಳ ಆಯ್ಕೆ :</u> ಈಗಾಗಲೇ ಸಮೀಕ್ಷೆ ಮೂಲಕ ನಿವೇಶನ ರಹಿತರ ಪಟ್ಟಿ ಹಾಗೂ ಸ್ವಂತ ನಿವೇಶನವನ್ನು ಹೊಂದಿದ್ದು ಮನೆ ಇಲ್ಲದವರ ಪಟ್ಟಿಯನ್ನು ಸಮೀಕ್ಷೆ ಮೂಲಕ 2003 ರಲ್ಲಿ ತಯಾರಿಸಲಾಗಿದ್ದು, ಆ ಪಟ್ಟಿಯಲ್ಲಿ ಇನ್ನೂ ಸೇರ್ಪಡೆ ಆಗದೇ ಇರುವ ನೈಜ ಮತ್ತು ಅರ್ಹ ಅಭ್ಯರ್ಥಿಗಳನ್ನು ಸೇರಿಸಿ ಮತ್ತು ಅನರ್ಹ ಅಭ್ಯರ್ಥಿಗಳಿದ್ದರೆ ಅಂತಹವರನ್ನು ಪಟ್ಟಿಯಿಂದ ತೆಗೆದು ಹಾಕಿ ಆಗಿಂದ್ದಾಗೆ ಪರಿಷ್ಕೃತ ಪಟ್ಟಿಯನ್ನು ಸ್ಥಳೀಯ ಸಂಸ್ಥೆಗಳು ತಯಾರಿಸುತ್ತಿದ್ದು ಈ ಪಟ್ಟಿಯನ್ನು ಪ್ರತಿ ಪಟ್ಟಣ ಪ್ರದೇಶಕ್ಕೆ ಪ್ರತ್ಯೇಕವಾಗಿ ನೇಮಕ ಆಗಿರುವ ಆಶ್ರಯ ಸಮಿತಿಗೆ ಒದಗಿಸಲಾಗುತ್ತದೆ. ಹಾಗೂ ಆಶ್ರಯ ಸಮಿತಿಯು ಈ ಪಟ್ಟಿಯ ಆಧಾರದ ಮೇಲೆ ಫಲಾನುಭವಿಗಳ ಆಯ್ಕೆ ಮಾಡುತ್ತದೆ.<br>❖ <u>ಮನೆಗಳ ವಿಸ್ತೀರ್ಣ ಮತ್ತು ವಿನ್ಯಾಸ :</u> ಕನಿಷ್ಠ 285 ಚ.ಅ. ನೆಲಗಟ್ಟು ವಿಸ್ತೀರ್ಣ ಇರುವಂತೆ ಮನೆ ನಿರ್ಮಿಸಬೇಕು. ಇದಕ್ಕಾಗಿ ಯಾವುದೇ ನಕ್ಷೆ ಅಥವಾ ವಿನ್ಯಾಸ ನಿಗದಿಪಡಿಸಿರುವುದಿಲ್ಲ. ಆದರೆ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಮಣ್ಣು, ಹವಾಗುಣ, ಪರಿಸ್ಥಿತಿ, ಸ್ಥಳೀಯವಾಗಿ ಲಭ್ಯವಿರುವ ಸಾಮಾಗ್ರಿಗಳ ಬಳಕೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಪ್ರದೇಶವಾರು ಮತ್ತು ಬದಲಿ ವಿನ್ಯಾಸಗಳನ್ನು ಅನುಸರಿಸಬಹುದು. ಮನೆ ನಿರ್ಮಾಣದ ಪ್ರತಿ ಹಂತದಲ್ಲಿಯೂ ಫಲಾನುಭವಿಯು ಸಕ್ರಿಯವಾಗಿ ಪಾಲ್ಗೊಂಡು ಒಳ್ಳೆಯ ಗುಣಮಟ್ಟದ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಹೊಂದಬಹುದು.</td></tr>
<tr><td>4.</td><td>ಮನೆ ನಿರ್ಮಾಣ ಮಾಡುವ ಕ್ರಮ<br>1. ಸ್ವಂತ ಫಲಾನುಭವಿಗಳಿಂದ<br><br>2. ಏಜೆನ್ಸಿ ಮೂಲಕ</td><td colspan="2">1. ಫಲಾನುಭವಿಯೇ ತನ್ನ ಸ್ವಂತ ಮನೆಯನ್ನು ಸ್ಥಳೀಯವಾಗಿ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಿಕೊಳ್ಳಬಹುದು<br>ಅಥವಾ<br>2. ಫಲಾನುಭವಿಯು ಇಚ್ಛಿಸಿದಲ್ಲಿ, ನಿಗಮವು ನೇಮಿಸುವ ಯಾವುದಾದರೊಂದು ಸಂಸ್ಥೆಯ ಮೂಲಕ ಮನೆ ಕಟ್ಟಿಸಿಕೊಡಲಾಗುವುದು. (ನಿರ್ಮಿತಿ ಕೇಂದ್ರ ಅಥವಾ ಭೂಸೇನಾ ನಿಗಮ)</td></tr>
</table>

ವಿ.ಸೂ : ಚೆಕ್ ಲಿಸ್ಟ್ : (ಒದಗಿಸಬೇಕಾದ ದಾಖಲೆಗಳು - ಸಂಕ್ಷಿಪ್ತ)

**ಫಲಾನುಭವಿಯಿಂದ :**

1. ವಸತಿಗಾಗಿ ನಿಗದಿತ ಅರ್ಜಿ (ನಮೂನೆ-1).
2. ಆದಾಯ ಪ್ರಮಾಣ ಪತ್ರ
3. ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್ ನಕಲು ಪ್ರತಿ
4. ಖಾತಾ ನಕಲು ಅಥವಾ ಫಾರಂ-3 ನಕಲು ಪ್ರತಿ
5. ಮನೆ ನಿರ್ಮಾಣದ ಅಂದಾಜು ಪಟ್ಟಿ ನಕಲು ಪ್ರತಿ
6. ಅನುಮೋದಿತ ನಕ್ಷೆ ನಕಲು ಪ್ರತಿ
7. ನಿಗಮದೊಂದಿಗೆ ಸಹಾಯಧನ ಪಡೆಯಲು ಕರಾರುಪತ್ರ (ನಮೂನೆ- 2ಎ)
8. ನಿವೇಶನ/ಮನೆಯನ್ನು 15 ವರ್ಷಗಳ ವರಗೆ ನಿಗಮದ ಪರವಾಗಿ ಅಡಮಾನ ಪತ್ರ ಬರೆದುಕೊಡಬೇಕು (ನಮೂನೆ-3ಎ)

**ಸಂಬಂಧಿಸಿದ ನಗರಸಭೆ / ನಗರ ಪಾಲಿಕೆ / ಜಿಲ್ಲಾಧಿಕಾರಿಗಳಿಂದ :**

1. ನಗರಸಭೆ / ಇಲಾಖೆ ಯೋಜನೆಯ ಅಡಿಯಲ್ಲಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಂಡ ಬಗ್ಗೆ ದೃಢೀಕರಣ ಪತ್ರ
2. ನಿಗದಿಪಡಿಸಿದ ನಮೂನೆಗಳಲ್ಲಿ ಪ್ರತಿ ವಾರ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಗತಿ ವರದಿಗಳನ್ನು ತಪ್ಪದೇ ಸಲ್ಲಿಸಬೇಕು.
3. ವಸತಿ ಯೋಜನೆಯ ಯಶಸ್ವಿ ಅನುಷ್ಠಾನದ ಬಗ್ಗೆ ಸಂಬಂಧಿಸಿದ ಇತರೆ ಮಾಹಿತಿ ಇತ್ಯಾದಿ.

**ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ:**

1. ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ನಂ. 1,2,3,4,ಐ.ಟಿ.ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು - 560 010.(ದೂರವಾಣಿ : 23118888 ಫ್ಯಾಕ್ಸ್ :23145085)

   ಈ-ಮೇಲ್ RGRHCL@KAR.NIC.IN , ವೆಬ್‌ಸೈಟ್ : HTTP://ASHRAYA.KAR.NIC.IN
2. ಜಿಲ್ಲಾಧಿಕಾರಿಗಳು ಅಥವಾ ಸಂಬಂಧಪಟ್ಟ ಆಯುಕ್ತರು/ಮುಖ್ಯಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಮಹಾನಗರ ಪಾಲಿಕೆ/ನಗರಸಭೆ/ಪಟ್ಟಣ ಪಂಚಾಯತ್ ಪಂಚಾಯತಿ.

**********